

# ಬೇಟೆಗಾರ ಜೇಡ

ಅದೊಂದು ದೊಡ್ಡ ಗಾತ್ರದ ಜೇಡ. ಅದನ್ನು ನೋಡಿದ ತಕ್ಷಣ ನನಗೆ ನೆನಪಾಗಿದ್ದು ಜೀಬ್ರಾ. ಜೀಬ್ರಾ ಮೈಮೇಲೆ ಕಪ್ಪು–ಬಿಳಿ ಬಣ್ಣದ ಪಟ್ಟೆಗಳು ಎದ್ದುಕಾಣುವಂತೆ ಈ ಜೇಡದಲ್ಲೂ ಕಪ್ಪು–ಬಿಳಿ ವರ್ಣ ಸಂಯೋಜನೆ ಗಮನಸೆಳೆಯುತ್ತದೆ.

ಎತ್ತರಿಸಿದ ಮತ್ತು ಉಬ್ಬಿದ ಶಿರೋವಕ್ಷ ಬೂದು ಬಣ್ಣ ಆ ಜೇಡದ್ದು. ಸಂವೇದನಾ ಅಂಗಗಳಾದ ಪೆಡಿಪಾಲ್ಪ್ ಕಪ್ಪು ಬಣ್ಣದ್ದಾಗಿವೆ. ಬಾಯಿಯ ಮುಂದೆ ಒಂದು ಜೋಡಿ ಚೆಲಿಸೆರಾಗಳು ಕಪ್ಪಾಗಿದ್ದು ಅದರಲ್ಲಿ ಕೆಂಪಾಗಿ ಉಬ್ಬಿದ ಗುರುತಿದೆ. ಉದರದ ಸುತ್ತಳತೆ ಶಿರೋವಕ್ಷಕ್ಕಿಂತ ಚಿಕ್ಕದು. ಉದರವು ಮಾಸಲು ಹಳದಿ ಬಣ್ಣವಿದ್ದು, ಕಿಬ್ಬೊಟ್ಟೆಯ ಸುತ್ತಲು ಕಪ್ಪಗಿದೆ. ಎಂಟು ಕಣ್ಣುಗಳಿವೆ. ನಾಲ್ಕು ಜೊತೆ ಕಾಲುಗಳಿದ್ದು, ಕಾಲುಗಳು ವಿಶಿಷ್ಟ ಮಾದರಿಯನ್ನು ಹೊಂದಿವೆ. ಪ್ರತಿಯೊಂದು ಕಾಲುಗಳು ಮೂರು ಕಪ್ಪು ಮಚ್ಚೆಯ ಬಿಳಿ ಪಟ್ಟೆಗಳನ್ನು ಮತ್ತು ನಾಲ್ಕು ಪರ್ಯಾಯ ಕಪ್ಪು ಪಟ್ಟೆಗಳನ್ನು ಹೊಂದಿದ್ದು, ಕಪ್ಪು–ಬಿಳಿ ಬಣ್ಣದ ಸಣ್ಣ ರೋಮಗಳಿವೆ. ತೊಡೆಯಲ್ಲಿ ಕಪ್ಪು ಚುಕ್ಕೆಗಳಿವೆ. ಪಾದಪಂಚಾಸ್ಥಿಯಲ್ಲಿ ಕಪ್ಪು ಪಟ್ಟಿ ದೊಡ್ಡದಾಗಿದೆ. ಎರಡನೇ ಜೋಡಿ ಕಾಲುಗಳು ಅತಿ ಉದ್ದವಾಗಿವೆ. ದೇಹದ ಹೊರ ಹೊದಿಕೆಯ (ಕ್ಯಾರಪೇಸ್) ಉದ್ದ 1.07 ಸೆಂ.ಮೀ., ಒಟ್ಟು ದೇಹದ ಉದ್ದ 3.10 ಸೆಂ.ಮೀ., ಕಾಲುಗಳ ಉದ್ದವು 7.03 ಸೆಂ.ಮೀ.ಗಳಷ್ಟಿವೆ.

ಇದನ್ನು 'ಬೇಟೆಗಾರ ಜೇಡ' ಎನ್ನುತ್ತಾರೆ. 'ಉಷ್ಣವಲಯದ ಬೇಟೆಗಾರ ಜೇಡ' ಎಂದೂ ಕರೆಯುತ್ತಾರೆ. ಇಂಗ್ಲಿಷಿನಲ್ಲಿ 'ಹಂಟ್ಸ್‌ಮನ್ ಸ್ಪೈಡರ್' ಅಥವಾ 'ಟ್ರಾಪಿಕಲ್ ಹಂಟ್ಸ್‌ಮನ್ ಸ್ಪೈಡರ್' ಎನ್ನುತ್ತಾರೆ. ವೈಜ್ಞಾನಿಕವಾಗಿ ಒಲಿಯೊಸ್ ಲಾಮಾರ್ಕಿ (Olios lamarcki) ಎಂದು ಹೆಸರಿಸಿ, ಇವನ್ನು ಸಂಧಿಪದಿಗಳ, ಅರಾಕ್ನಿಡಾ ವರ್ಗದ, ಅರೇನೀ ಗಣದ, ಸ್ಪಾರಾಸಿಡೇ ಕುಟುಂಬಕ್ಕೆ ಸೇರಿಸಲಾಗಿದೆ.

**ಮರದ ಕಾಂಡ, ತೊಗಟೆಗಳಲ್ಲಿ, ಕಲ್ಲುಗಳಲ್ಲಿ, ಮನೆಗಳ ಗೋಡೆ, ಬಿರುಕುಗಳಲ್ಲಿ ವಾಸಿಸುವ ಈ ಜೇಡದ ಬೇಟೆಯ ವೈಖರಿಯೇ ವಿಶಿಷ್ಟ.**

■ **ಶಶಿಧರಸ್ವಾಮಿ ಆರ್. ಹಿರೇಮಠ**

ಒಲಿಯೊಸ್ – ಈ ಕುಲವನ್ನು ಫ್ರಾನ್ಸ್ ದೇಶದ ವಿಜ್ಞಾನಿ ಚಾರ್ಲ್ಸ್ ಅಥಾನಾಸೆ ವಾಲ್ಕೆನೇರ್ ಅವರು 1837ರಲ್ಲಿ ಪ್ರಥಮವಾಗಿ ವಿವರಿಸಿದರು. ಇದು ಅತ್ಯಂತ ವಿಶಿಷ್ಟ ಬೇಟೆಗಾರ ಜೇಡದ ಕುಲವಾಗಿದೆ. ಪ್ರಪಂಚದಾದ್ಯಂತ 177 ಜಾತಿಗಳನ್ನು ಒಳಗೊಂಡಿದೆ. ಅದರಲ್ಲಿ 27 ಜಾತಿಗಳು ಭಾರತದಲ್ಲಿವೆ ಎಂದು ತಿಳಿದುಬಂದಿದೆ.



ಇತರ ಜೇಡಗಳಿಗೆ ಹೋಲಿಸಿದರೆ ಬೇಟೆಗಾರ ಜೇಡಗಳಲ್ಲಿನ ಪ್ರಣಯವು ಆಶ್ಚರ್ಯಕರವಾಗಿದೆ. ಗಂಡು ಹೆಣ್ಣಿನಿಂದ ವಿರಳವಾಗಿ ಆಕ್ರಮಣಕ್ಕೆ ಒಳಗಾಗುತ್ತದೆ ಮತ್ತು ಪ್ರಕ್ರಿಯೆಯು ಹಲವು ಗಂಟೆಗಳವರೆಗೆ ಇರುತ್ತದೆ. ಸಂಯೋಗದ ನಂತರ, ಹೆಣ್ಣು ತನ್ನ ಮೊಟ್ಟೆಯ ಚೀಲವನ್ನು ತೊಗಟೆ ಅಥವಾ ಬಂಡೆಯ ಕೆಳಗೆ ಇರಿಸಿ ಮೊಟ್ಟೆಯೊಡೆಯುವವರೆಗೆ ಅದನ್ನು ಕಾಪಾಡುತ್ತದೆ. ಸರಿಯಾದ ಸಮಯದಲ್ಲಿ ತಾಯಿ ಜೇಡವು ತನ್ನ ನವಜಾತ ಮರಿಗಳಿಗೆ ಸಹಾಯ ಮಾಡಲು ಮೊಟ್ಟೆಯ ಚೀಲವನ್ನು ತೆರೆಯುತ್ತದೆ ಮತ್ತು ತಾಯಿ ಜೇಡವು ಹಲವಾರು ವಾರಗಳವರೆಗೆ ತನ್ನ ಮರಿಗಳೊಂದಿಗೆ ಇರುತ್ತದೆ. ಸ್ವಲ್ಪ ದೊಡ್ಡವಾದ ಕೂಡಲೆ ಮರಿಗಳು ತಾಯಿಯಿಂದ ಬೇರ್ಪಡುತ್ತವೆ. ಈ ಬೇಟೆಗಾರ ಜೇಡಗಳು ಭಾರತ ಹಾಗೂ ಮಡಗಾಸ್ಕರ್, ಶ್ರೀಲಂಕಾ, ಬಾಂಗ್ಲಾದೇಶಗಳಲ್ಲಿಯೂ ಕಂಡುಬರುತ್ತವೆ.

ಸಾಮಾನ್ಯವಾಗಿ ಮರದ ಕಾಂಡಗಳಲ್ಲಿ, ಮರದ ತೊಗಟೆಯಲ್ಲಿ, ಕಲ್ಲುಗಳ ಕೆಳಗೆ ಅಥವಾ ಮನೆಗಳ ಗೋಡೆಗಳ ಮೇಲೆ, ಬಿರುಕುಗಳ ನಡುವೆ ವಾಸಿಸುತ್ತವೆ. ಈ ಬೇಟೆಗಾರ ಜೇಡಗಳು ಬಲೆಯನ್ನು ನೇಯುವುದಿಲ್ಲ. ಆದರೆ ಬಲು ಚುರುಕಾಗಿರುವ ಇವು ಬೇಟೆಯನ್ನು ರಹಸ್ಯವಾಗಿ ಹಿಂಬಾಲಿಸಿ ವೇಗದೊಂದಿಗೆ ಬೆಂಬತ್ತಿ ತಮ್ಮ ದೊಡ್ಡದಾದ ಮತ್ತು ಶಕ್ತಿಯುತವಾಗಿರುವ ಕೋರೆಗಳಿಂದ ವಿವಿಧ ಕೀಟಗಳು, ಸಂಧಿಪದಿ, ಸಣ್ಣ ಹಲ್ಲಿಗಳನ್ನು ಹಿಡಿದು ತಿನ್ನುತ್ತವೆ. ಚುಚ್ಚುವ ವಿಷದಿಂದ ಬೇಟೆಯು ನಿಶ್ಚಲವಾಗುವವರೆಗೆ ಬಲಿಪಶುವನ್ನು ಹಾಗೆಯೇ ಹಿಡಿದಿಟ್ಟುಕೊಂಡು ರಸಾಹಾರ ಹೀರಲು ಪ್ರಾರಂಭಿಸುತ್ತವೆ.

ಪ್ರತಿಕ್ರಿಯಿಸಿ: feedback@sudha.co.in